ಎನ್.ಜಿ.ಇ.ಎಫ್. ಸಂಸ್ಥೆಯ ಷೇರು ಮಾರಾಟ ವಿಚಾರ

ಳಖಖ. ಶ್ರೀ ಜಿ. ಎಸ್. ಆಚಾರ್ (ಬೈಂದೂರು)—ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಎನ್.ಜಿ.ಇ.ಎಫ್. ಸಂಸ್ಥೆಯ ಎಷ್ಟು ಷೇರುಗಳನ್ನು ಎಇಜಿ ಕಂಪನಿಗೆ ಮಾರಾಟ ಮಾಡಲಾಗಿದೆ ?

ಆ) ಮಾರಾಟಕ್ಕೆ ಕಾರಣವೇನು ?

ಇ) ಭಾರತೀಯ ಜೀವವಿಮಾ ನಿಗಮ ಮತ್ತು ಯೂನಿಟ್ ಟ್ರಸ್ಟ್ ಆಫ್ ಇಂಡಿಯಾ ಅವರಿ ಷೇರು ಖರೀದಿಸಲು ಬೇಡಿಕೆ ಸಲ್ಲಿಸಿದ್ದರೂ ಅದನ್ನು ತಿರಸ್ಕರಿಸಲು ಕಾರಣವೇನು ?

ಶ್ರೀ ಜೆ. ಹೆಚ್. ಪಟೀಲ್ (ಕೈಗಾರಿಕಾ ಮತ್ತು ವಿದ್ಯುತ್ ಮಂತ್ರಿಗಳು).—

ಅ) ೧ ಲಕ್ಷ ಹಕ್ಕಿನ ಷೇರುಗಳು.

ಆ) ರಾಜ್ಯ ಸರ್ಕಾರವು ಬೃಹತ್ ಕೈಗಾರಿಕೆಗಳಲ್ಲಿ ಇನ್ನು ಹೂಂದೆ ಹೆಚ್ಚಿನ ಷೇರು ಬಂಡವಾಳ ವನ್ನು ತೊಡಗಿಸದಿರಲು ನಿರ್ಧಾರ ತೆಗೆದುಕೊಂಡಿರುತ್ತೆ. ಸದರಿ ನಿರ್ಧಾರದನ್ವಯ ರಾಜ್ಯ ಸರ್ಕಾರವು ತನ್ನ ಪಾಲಿನ ೮೬,೮೦೦ ಹಕ್ಕಿನ ಷೇರುಗಳನ್ನು ಎಇಜಿ ಪರವಾಗಿ ತ್ಯಾಗ ಮಾಡಿದೆ.

ಇ) ಷೇರುಗಳ ಖರೀದಿಗಾಗಿ ಭಾರತೀಯ ಜೀವವಿಮಾ ನಿಗಮ ಯಾವುದೇ ಪ್ರಸ್ತಾಪ ಮಾಡಿಲ್ಲ. ಯೂನಿಟ್ ಟ್ರಸ್ಟ್ ಆಫ್ ಇಂಡಿಯಾ ಷೇರುಗಳನ್ನು ಖರೀದಿಸಲು ಪ್ರಸ್ತಾಪಿಸಿದ್ದು ಅದನ್ನು ಪರಿಶೀಲಿಸಲಾಗುತ್ತಿದೆ.

ಗಣಿ ಹಕ್ಕಿನ ತೆರಿಗೆಯನ್ನು ಮಂಡಲ್ ಪಂಚಾಯಿತಿಗಳಿಗೆ ವಹಿಸುವ ಬಗ್ಗೆ

ಳಗಗ. ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧) ಜಿಲ್ಲಾ ಪರಿಷತ್ತಿನ ಕಾಯ್ದೆಯ ಪ್ರಕಾರ ಗಣಿ ಹಕ್ಕಿನ ತೆರಿಗೆಯನ್ನು ಪಡೆಯಲು ಮಂಡಲ್ ಪಂಚಾಯಿತಿಗಳಿಗೆ ಅವಕಾಶವಿರುವುದು ನಿಜವೇ ?

೨) ರಾಜ್ಯ ಸರ್ಕಾರವು ಈಗಾಗಲೇ ಗಣಿ ಮಾಲೀಕರಿಂದ ರಾಜಧನವನ್ನು ವಸೂಲಿ ಮಾಡುತ್ತಿದು ಗಣಿ ಹಕ್ಕಿನ ತೆರಿಗೆಯನ್ನು ವಸೂಲಿ ಮಾಡಲು ಮಂಡಲ್ ಪಂಚಾಯತ್‌ಗಳಿಗೆ ಬಿಟ್ಟು ಕೊಡಲಾಗುವುದೇ ಅಥವಾ ಸರ್ಕಾರವೇ ತೆರಿಗೆಯನ್ನು ಪಡೆಯುವುದೇ ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು).—

೧) ಹೌದು

೨) ಗಣಿ ಹಕ್ಕಿನ ತೆರಿಗೆಯನ್ನು ವಸೂಲಿ ಮಾಡುವ ಹಕ್ಕು ಗಣಿ ಇಲಾಖೆಯ ವ್ಯಾಪ್ತಿಗೆ ಸೇರಿದ್ದು ಇದನ್ನು ಮಂಡಲ್ ಪಂಚಾಯಿತಿಗೆ ಕೊಡುವ ಪ್ರಶ್ನೆ ಬರುವುದಿಲ್ಲ.

ಹೊಳೆಯಿಂದ ಮರಳು ತೆಗೆಯುವ ವಿಚಾರ

ಳಖ೦. ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲ್ಲೂಕಿನಲ್ಲಿ ಹಾಲಾಡಿಯ ಹೊಳೆಯಿಂದ ಅನಿರ್ಬಂಧಿತವಾಗಿ ಮರಳು (ಹೊಯಿಗೆ) ತೆಗೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಅ) ಸರ್ಕಾರಕ್ಕೆ ಸಿಗಬೇಕಾದ ಗೌರವಧನಕ್ಕಿಂತ ಬಹುಪಟ್ಟು ಮಧ್ಯವರ್ತಿಗಳು ಶೋಷಣೆಯಿಂದ ಅಕ್ರಮ ಲಾಭಗಳಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ,

ಇ) ಇದನ್ನು ತಪ್ಪಿಸಲು ಸರ್ಕಾರದವರು ಯಾವ ಕ್ರಮ ಕೈ ಗೊಳ್ಳುವರು,

ಈ) ಮಾರಳ್ಳಿ ತೆಗೆದಂ ಅಲ್ಲಿನ ಸೇತುವೆಗೆ ಅಪಾಯವಾಗದಂತೆ ಮುನ್ನೆಚ್ಚರಿಕೆ ವಹಿಸಲಾಗುವುದೇ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು).—

ಅ) ಬಂದಿದೆ.

ಆ) ಇಲ್ಲ.

ಇ) (ಅ) ಗೆ ಕೊಟ್ಟಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಗುತ್ತಿಗೆಯನ್ನು ನೀಡುವಾಗಲೇ ಕೆ.ಎಂ.ಎಂ.ಸಿ. ರೂಲ್ಸ್ ೧೯೬೯ರ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಗುತ್ತಿಗೆದಾರರಿಗೆ ಷರತ್ತು ಹಾಕುವುದರಿಂದ ಇಂತಹ ಅಪಾಯಗಳಿಗೆ ಅವಕಾಶವಿಲ್ಲ

ರಾಜ್ಯದ ರೇಷ್ಮೆ ಕೃಷಿ ಮತ್ತು ಉದ್ಯಮದ ಬಗ್ಗೆ

೩೨೭. ಶ್ರೀ ಜಿ. ರಾಜೂಗೌಡ(ಹನೂರು).—ಮಾನ್ಯ ರೇಷ್ಮೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ರೇಷ್ಮೆ ಕೃಷಿ ಹಾಗೂ ರೇಷ್ಮೆ ಉದ್ಯಮವನ್ನು ವಿಸ್ತರಿಸಲು ಹಾಗೂ ಅಭಿವೃದ್ಧಿ ಪಡಿಸಲು ವಿಶ್ವಬ್ಯಾಂಕಿನ ನೆರವನ್ನು ಮುಂತ್ತೆ ಕೋರಲಾಗಿದೆಯೇ,

ಆ) ಇದರ ನೀಲಿ ನಕ್ಷೆಯಂತೆ ಯಾವ ಯಾವ ಯೋಜನೆಗೆ ಎಷ್ಟೆಷ್ಟು ಹಣವನ್ನು ಕೇಳಲಾಗಿದೆ,

ಇ) ರಾಜ್ಯದಲ್ಲಿ ರೇಷ್ಮೆ ಕೈಗಾರಿಕಾ ನಿಗಮವು ಅಸ್ತಿತ್ವಕ್ಕೆ ಬಂದಮೇಲೆ ಇಲ್ಲಿಯವರೆಗೆ ಸಾಧಿಸಿರುವ ಪ್ರಗತಿ ಹಾಗೂ ಉಂಟಾಗಿರುವ ನಷ್ಟದ ವಿವರ ಕೊಡುವುದು.

ಶ್ರೀ ಕೆ. ಎಂ. ಮುನಿಯಪ್ಪ (ರೇಷ್ಮೆ ಸಚಿವರು),—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತವು ೧೯೯೬-೧೯೯೧ ರಿಂದ ಜಾರಿಗೆ ಬರುವಂತೆ ಈ ಕೆಳಕಂಡ ಸರ್ಕಾರಿ ರೇಷ್ಮೆ ಘಟಕಗಳನ್ನು ತನ್ನ ಹತೋಟಿಗೆ ತೆಗೆದುಕೊಂಡಿದ್ದು ಅದಂ ಅನುಭವಿಸಿರುವ ಪ್ರಗತಿ ಹಾಗೂ ನಷ್ಟದ ವಿವರಗಳನ್ನು ಈ ಕೆಳಕಂಡಂತೆ ನೀಡಲಾಗಿರುತ್ತದೆ.

೧. ರೇಷ್ಮೆ ನೇಯ್ಗೆ ಕಾರ್ಖಾನೆ ಮೈಸೂರು.

೨. ಜೂಟು ರೇಷ್ಮೆ ಗಿರಣಿ ಚನ್ನಪಟ್ಟಣ.

೩. ರೇಷ್ಮೆ ಫಿಲೇಚರ್ ಟಿ. ನರಸೀಪುರ.

೪. ರೇಷ್ಮೆ ಫಿಲೇಚರ್ ಕನಕಪುರ